(2) ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ, 2011ನ್ನು ಜಂಟಿ ಪರಿಶೀಲನಾ ಸಮಿತಿಗೆ ವಹಿಸುವ ಬಗ್ಗೆ.

ಮಾನ್ಯ ಅಧ್ಯಕ್ಷರೆ, ದಿನಾಂಕ: 14.12.2011ರಂದು 2011ನೇ ಸಾಲಿನ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕವನ್ನು ಪರಿಶೀಲನೆಗಾಗಿ ಜಂಟಿ ಪರಿಶೀಲನಾ ಸಮಿತಿಗೆ ವಹಿಸಲು ಪ್ರಸ್ತಾವನೆಯನ್ನು ಮಂಡಿಸಿದ್ದು, ಜಂಟಿ ಪರಿಶೀಲನಾ ಸಮಿತಿಯನ್ನು ರಚಿಸಲು ಮಾನ್ಯ ಸಭಾಧ್ಯಕ್ಷರಿಗೆ ಪೂರ್ಣ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಮಂಡಿಸಿರುವ ಪ್ರಸ್ತಾವಗಳಿಗೆ ಸದನದ ಸಹಮತ ಇದೆ ಎಂದು ಭಾವಿಸುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಮಾನ್ಯ ಅಧ್ಯಕ್ಷರೆ, ಘನವೆತ್ತ ಸರ್ಕಾರ ಕೊಟ್ಟಿರುವ ಉತ್ತರಗಳನ್ನು ನೋಡಿದರೆ ನಮಗೆ ಕೂಡ ಭಯ ಬರುತ್ತದೆ. ನಾನು ಒಂದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯನ್ನು ಕೇಳಿದ್ದೆನು. ಅದು ಚುಕ್ಕೆ ಗುರುತಿಲ್ಲದ ಪ್ರಶ್ನೆ ಪಟ್ಟಿಯಲ್ಲಿ ಬಂದಿದೆ. ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಯಾರ್ಯಾರ ಮೇಲೆ ಎಷ್ಟೆಷ್ಟು ಪ್ರಕರಣಗಳು ಇವೆ? ಎಷ್ಟು ಕೇಸು ದಾಖಲು ಆಗಿವೆ? ಅದರ ಮಾಹಿತಿಯನ್ನು ಕೊಡಿ ಎಂದು ಕೇಳಿದ್ದೆನು. ನನಗೆ ಆಶ್ಚರ್ಯ ಎನಿಸುತ್ತದೆ. ಏಕೆಂದರೆ ನನ್ನ ಹೆಸರಿನಲ್ಲಿ ಕೂಡ ಪ್ರಕರಣ ಇದೆಯೆಂದು ಬಂದಿದೆ. ಅದನ್ನು ಒಳಗಡೆ ತೆಗೆದು ನೋಡುತ್ತೇನೆ, ಆದರೆ ಅಲ್ಲಿ ಬೇರೆಯವರ ಹೆಸರು ಇದೆ. ಮೊದಲನೆ ಪುಟದಲ್ಲಿ ಏನು ಮಾಹಿತಿ ಕೊಡುತ್ತೀರಿ, ಅದರಲ್ಲಿ ಅಪ್ಪಾಜಿ ನಾಡಗೌಡರ ಮೇಲೆ ಕೂಡ ಪ್ರಕರಣ ಇದೆ ಎಂದು ಹಾಕುತ್ತಾರೆ. ಯಾರು ಇಷ್ಟು irresponsible ಆಗಿ ಉತ್ತರಗಳನ್ನು ಕೊಡುತ್ತಾರೋ ಗೊತ್ತಿಲ್ಲ. ಇದು ಮಾಧ್ಯಮದವರಿಗೆ ಸಿಕ್ಕರೆ ಅವರು ಒಳಗಡೆ ಇರುವುದನ್ನು ನೋಡುವುದಿಲ್ಲ, ಮೇಲೆ ಇರುವುದನ್ನು ನೋಡಿ ಹಾಕುತ್ತಾರೆ. ಆಗ ನಮ್ಮ ಘನತೆ ಏನು? ಮರ್ಯಾದೆ ಏನು ಆಗುತ್ತದೆ? ಇದು Home Department ಗೆ ಸಂಬಂಧ ಪಟ್ಟಂತೆ ಪ್ರಶ್ನೆ ಕೊಟ್ಟಿರುವುದು.

ಅಧ್ಯಕ್ಷರು : Take action against the concerned. ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳಿ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) : ಇಲ್ಲಿ ಉತ್ತರಗಳನ್ನು ಕೊಡುವಾಗ ಸರಿಯಾಗಿ ನೋಡುವುದೇ ಇಲ್ಲ. ಯಾವುದೋ ಇಲಾಖೆಗೆ

ಯಾವುದೋ ಇಲಾಖೆಯವರಿಗೆ ಉತ್ತರ ಕೊಡುತ್ತಾರೆ. ತಾವು ಸ್ವಲ್ಪ ಅವರಿಗೆ ಚುರುಕು ಮುಟ್ಟಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : I fully agree with that. ಅದು ಯಾವ ಇಲಾಖೆಯಿಂದ ಆಗಿದೆ, ಯಾರು ಮಾಡಿದ್ದಾರೆಂದು ನೋಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಶೂನ್ಯ ವೆಳೆ ವಿಷಯದ ಚರ್ಚೆ, ಶ್ರೀ ಎಸ್.ಆರ್. ಶ್ರೀನಿವಾಸ್ ಸದಸ್ಯರು ಇಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಪ್ರಸ್ತಾಪ ಮಾಡಿದ ಶೂನ್ಯವೇಳೆ ವಿಷಯಕ್ಕೆ ನನಗೆ ಅರಣ್ಯ ಸಚಿವರು ಉತ್ತರ ಕೊಡಬೇಕಾಗಿತ್ತು.

ಅಧ್ಯಕ್ಷರು : ಶ್ರೀ ಗೂಳಿಹಟ್ಟಿ ಶೇಖರ್ ರವರು ಕೇಳಿ. ಅವರಿಗೆ ಸಂಬಂಧಪಟ್ಟಂಥ ವಿಷಯಗಳು ಎರಡು ಇವೆ ಅವರು ಇಲ್ಲ. ಶ್ರೀ ಹೆಚ್.ಎಸ್. ಪ್ರಕಾಶ್‌ರವರು ಕೇಳಿ.

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

1. ವಿಷಯ : ಹಾಸನದಲ್ಲಿ IIT college ಗೆಂದು ರೈತರಿಂದ ಭೂಮಿಯನ್ನು ವಶಪಡಿಸಿ ಕೊಂಡಿರುವುದನ್ನು ವಾಪಸ್ಸು ನೀಡುವ ಬಗ್ಗೆ.

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ) : ಮಾನ್ಯ ಅಧ್ಯಕ್ಷರೆ, 2007 ರಲ್ಲಿ ಹಾಸನದಲ್ಲಿ KIADB ಯಿಂದ 1,052 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡು 4(1) ಮತ್ತು 6(1) notification ಮಾಡಿದ್ದಾರೆ. ಅದನ್ನು ಮಾಡಿದ ಮೇಲೆ IIT college ಹಾಸನಕ್ಕೆ ಬರಲಿಲ್ಲ. ಅದಾದ ಮೇಲೆ ಭೂಮಿ ಮಾಲೀಕರಿಗೆ ಭೂಮಿಯನ್ನು ವಾಪಸ್ಸು ಕೊಡುತ್ತಿಲ್ಲ. ಈಗ ಅದನ್ನು ಖಾಸಗಿಯವರಿಗೆ ಭೂಮಿಯನ್ನು ಕೊಡಬೇಕೆಂದು ನಿರ್ಣಯ ತೆಗೆದು ಕೊಂಡಿದ್ದಾರೆ. ಅದು ಬಹಳಷ್ಟು ಬೆಲೆಬಾಳುವ ಜಮೀನಾಗಿರುವುದರಿಂದ 1,052 ಎಕರೆ IIT ಗೆ ಎಂದು ಏನು acquire ಮಾಡಿದ್ದರು, ಅದನ್ನು